Form No.4 (Civil)
Deposition
Sheets
(R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆಃ 32/2020

ಪ್ರಾ.ಸಾ. 8 ಚಾ.ಸಾ 8

| | | |
|---|---|---|
| ಹೆಸರು | : | ಶ್ರೀಮಂತ |
| ತಂದೆಯ ಹೆಸರು | : | ಬಸಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ | : | ಸುರಪುರ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 21-11-2025
ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

1 ನೇ ಆರೋಪಿ ನನ್ನ ಸಂಬಂಧಿಕರು ಆಗಿರುತ್ತಾಳೆ. 1 ನೇ ಆರೋಪಿ ಏನು ಕೆಲಸ ಮಾಡುತ್ತಿದ್ದಳು ಎಂದು ನನಗೆ ಗೊತ್ತಿರುವುದಿಲ್ಲ, 1 ನೇ ಆರೋಪಿತಳ ಮೃತ ಗಂಡ ಏನು ಕೆಲಸ ಮಾಡುತ್ತಿದ್ದ ಎಂದು ನನಗೆ ಗೊತ್ತಿಲ್ಲ. ನನ್ನ ಮೊಬೈಲ ಸಂಖ್ಯೆ 9880557778 ಆಗಿರುತ್ತದೆ. 1 ನೇ ಆರೋಪಿತಳ ಗಂಡ ಹೇಗೆ ಮೃತ ಪಟ್ಟ ಎಂದು ನನಗೆ ಗೊತ್ತಿರುವುದಿಲ್ಲ. ಈ ಕೇಸಿನ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೊಲೀಸರ ಮುಂದು ಹೇಳಿಕೆ ನೀಡಿರುವುದಿಲ್ಲ. ಮೊಬೈಲ ಸಂಖ್ಯೆ 9008175148 ಈ ಮೊಬೈಲ ಸಂಖ್ಯೆ ನನ್ನದಾಗಿರುವುದಿಲ್ಲ. 2 ನೇ ಆರೋಪಿಯ ಪರಿಚಯ ಇರುವುದಿಲ್ಲ.

(**ಈ ಸಂದರ್ಭದಲ್ಲಿ ಮಾನ್ಯ ಪಿಪಿರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ, ಅನುಮತಿ ನೀಡಲಾಗಿದೆ.**)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

2. ನಾನು ಆಗಾಗ ಯಾದಗಿರಿಗೆ ಬಂದಾಗ 1 ನೇ ಆರೋಪಿತಳು 2 ನೇ ಆರೋಪಿತನ ಜೊತೆಗೆ ಇದ್ದದ್ದನ್ನು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿತಳು ನನಗೆ 2 ನೇ ಆರೋಪಿಯನ್ನು ಪರಿಚಯ

ಮಾಡಿಸಿಕೊಟ್ಟಿರುತ್ತಾಳೆ ಎಂದರೆ ಸರಿಯಲ್ಲ. ಮೊಬೈಲ ಸಂಖ್ಯೆ 9008175148 ನನ್ನದ್ದಲ್ಲ ಎಂದರೆ ಸರಿಯಲ್ಲ. ಇದ್ದನ್ನು ನಾನು ಪಡೆದುಕೊಂಡು 1ನೇ ಆರೋಪಿತಳಿಗೆ ಉಪಯೋಗಿಸಲು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ಮೊಬೈಲ ಸಂಖ್ಯೆ ಏರಟೇಲಗೆ ಅರ್ಜಿ ಕೊಟ್ಟು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು **ನಿ.ಪಿ.30** ಎಂದು ಗುರುತಿಸಲಾಯಿತು. 1ನೇ ಆರೋಪಿತಳು ಬ್ಯೂಟಿ ಪಾರ್ಲರನಲ್ಲಿ ಕೆಲಸ ಮಾಡುತ್ತಿದ್ದು ತನ್ನ ಗಂಡ ಹೇಗೆ ಸತ್ತ ಎಂದು ನನಗೆ ಗೊತ್ತಿಲ್ಲ ಕೇಳುತ್ತಿದ್ದಳು ಎಂದರೆ ಸರಿಯಲ್ಲ. 1ನೇ ಆರೋಪಿತಳು ಬಾಡಿಗೆ ಬಂದ ಮೇಲೆ ಆರೋಪಿ 1 ಮತ್ತು 2 ಸೇರಿ 1ನೇ ಆರೋಪಿತಳ ಗಂಡನನ್ನು ಕೊಲೆ ಮಾಡಿ ಗುರುಮಠಕಲ್ ಸಮೀಪ ಗುಡ್ಡಗಾಡಿನಲ್ಲಿ ಹಾಕಿರುತ್ತಾರೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಅವರು ತಮ್ಮ ಅನೈತಿಕ ಸಂಬಂಧದ 1ನೇ ಆರೋಪಿತಳು ತನ್ನ ಗಂಡನನ್ನು ಕೊಲೆ ಮಾಡಿರುತ್ತಾರೆ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ, ಈ ಕುರಿತು ನಾನು ಪೊಲೀಸರಿಗೆ ಈಗ ವಿವರವಾಗಿ ಓದಿ ಹೇಳಿದಂತೆ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯನ್ನು **ನಿ.ಪಿ.31** ಎಂದು ಗುರುತಿಸಲಾಯಿತು. ಸದರಿ ವಿಷಯ ಗೊತ್ತಿದ್ದರು ಸಹ 1ನೇ ಆರೋಪಿತಳು ನನಗೆ ಸಂಬಂಧಿಕಳು ಆಗಿದ್ದರಿಂದ ಅವರಿಗೆ ಸಹಾಯ ಮಾಡುವುದಕ್ಕಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 1 ನೇ ಆರೋಪಿಯ ಪರವಾಗಿ ಶ್ರೀ. ಎಮ್.ಎಮ್.ಇ ವಕೀಲರಿಂದ</u>

- ಸಾಕ್ಷಿಗೆ ಪಾಟೀ ಸವಾಲ ಇಲ್ಲವೆಂದು ನುಡಿಯುತ್ತಾರೆ

<u>ಪಾಟೀ ಸವಾಲು 2 ನೇ ಆರೋಪಿಯ ಪರವಾಗಿ ಶ್ರೀ. ಬಿ.ಬಿ.ಕೆ ವಕೀಲರಿಂದ</u>

- ಸಾಕ್ಷಿಗೆ ಪಾಟೀ ಸವಾಲ ಇಲ್ಲವೆಂದು ನುಡಿಯುತ್ತಾರೆ.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.

Form No.4 (Civil) Deposition Sheets (R.P.No.57)

# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಎಸ್.ಸಿ. ಸಂಖ್ಯೆ: 32/2020

ಪ್ರಾ.ಸಾ. 9 ಚಾ.ಸಾ 27

| | | |
|---|---|---|
| ಹೆಸರು | : | ಮಂಜುಳಾ |
| ತಂದೆಯ ಹೆಸರು | : | ನರಸಪ್ಪ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಮಹಿಳಾ ಪೊಲೀಸ ಠಾಣೆ ಪಿ.ಎಸ್,ಐ ಯಾದಗಿರಿ |
| ವಾಸ | : | ಯಾದಗಿರಿ |

## ಪ್ರಮಾಣ ವಚನ ಭೋಧಿಸಿದ ದಿನಾಂಕ: 21-11-2025
## ಮುಖ್ಯ ವಿಚಾರಣೆ ಸರಕಾರಿ ಅಭಿಯೋಜಕರಿಂದ

ನಾನು ದಿಃ 09.08.2023 ರಿಂದ ಇಲ್ಲಿಯವರೆಗೆ ನಾನು ಯಾದಗಿರಿಯ ಮಹಿಳಾ ಪೊಲೀಸ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 10.07.2018 ರಿಂದ 07.09.2019 ರವರೆಗೆ ಯಾದಗಿರಿ ನಗರ ಪೊಲೀಸ ಠಾಣೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯನಿರ್ವಹಿಸಿದ್ದೇನೆ.

3. ದಿಃ 02.03.2019 ರಂದು ನಾನು ಠಾಣಾ ಕರ್ತವ್ಯದಲ್ಲಿದ್ದಾಗ ಸಾಯಂಕಾಲ 6.00 ಗಂಟೆಗೆ ಅಶ್ವಿನಿ ಗಂಡ ಜಗನಾಥ ಕಿಲ್ಲಂಕೇರಾ (ಎ-1) ಆತನ ಮೈದುನ ಶ್ರೀಕಾಂತ ಹಾಗೂ ಕೆಲವು ಜನರು ಕೂಡಿಕೊಂಡು ಠಾಣಗೆ ಬಂದು ದಿಃ 22.02.2019 ರಂದು ತನ್ನ ಕಾಣೆಯಾದ ಬಗ್ಗೆ ಹೇಳಿಕೆ ದೂರನ್ನು ನೀಡಿದ್ದು ಅದರ ಆಧಾರದ ಮೇಲೆ ಠಾಣಾ ಗುನ್ನೆ ಸಂಖ್ಯೆ 19/2019 ರಲ್ಲಿ ಪ್ರಕರಣವನ್ನು ನೊಂದಾಯಿಸಿಕೊಂಡಿದ್ದೇನೆ. ಪ್ರ.ಪ್ರ. ವರದಿಯನ್ನು ಮಾನ್ಯ

ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಅದನ್ನು **ನಿ.ಪಿ.32** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.32(ಎ)** ಎಂದು ಗುರುತಿಸಲಾಯಿತು. ಪ್ರ.ಪ್ರ. ವರದಿಯನ್ನು **ನಿ.ಪಿ.33** ಎಂದು ಸಾಕ್ಷಿದಾರರ ಸಹಿಯನ್ನು **ನಿ.ಪಿ.33(ಎ)** ಎಂದು ಗುರುತಿಸಲಾಯಿತು. ಎಲ್ಲ ಯಾದಗಿರಿ ಜಿಲ್ಲಾ ಮತ್ತು ಇತರ ಠಾಣೆಗಳಿಗೆ ಜಗನಾಥ ಇವರುಕಾಣೆಯಾದ ಬಗ್ಗೆ ಈ-ಮೇಲ ಸಂದಂ಼ೇಶವನ್ನು ಕಳುಹಿಸಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಅದನ್ನು **ನಿ.ಪಿ.34** ಎಂದು ಗುರುತಿಸಲಾಯಿತು.

4. ದಿಃ 04.03.2019 ರಂದು ಯಾದಗಿರಿ ಠಾಣೆಗೆ 1 ನೇ ಆರೋಪಿತಳು ಮತ್ತು ಆಕೆಯ ಮೈದುನಾ ಶ್ರೀಕಾಂತ (ಚಾಸಾ-1) ಬಂದು ಗುರುಮಠಕಲ್ ಪೊಲೀಸ ಠಾಣೆಯಲ್ಲಿ ಯು.ಡಿ.ಆರ್ ಆಗಿರುತ್ತದೆ ಅದರಲ್ಲಿ ಇರುವಂತಹ ವಸ್ತುಗಳಾದ ಬಟ್ಟೆ, ಕರವಸ್ತ್ರ. ಚಪ್ಪಲಿ ಇನ್ನಿತರ ವಸ್ತುಗಳನ್ನು ನೋಡಿ ಗುರುತಿಸಿ ಪುರವಣಿ ಹೇಳಿಕೆ ಕೊಟ್ಟಿರುತ್ತಾಳೆ. ನಂತರ ಸದರಿ ಪ್ರಕರಣ ಘೋರ ಪ್ರಕರಣವಾಗಿದ್ದರಿಂದ ಬಾಪುಗೌಡರವರಿಗೆ ಕಡತವನ್ನು ವಹಿಸಿಕೊಟ್ಟಿರುತ್ತೇನೆ.

<u>ಪಾಟೀ ಸವಾಲು 1 ನೇ ಆರೋಪಿಯ ಪರವಾಗಿ ಶ್ರೀ. ಎಮ್.ಎಮ್.ಇ ವಕೀಲರಿಂದ</u>

5. ದಿಃ 02.03.2019 ರಂದು 1 ನೇ ಆರೋಪಿತಳು ಠಾಣೆಗೆ ಹಾಜರಾದ ತನ್ನ ಗಂಡ ಕಾಣೆಯಾದ ಬಗ್ಗೆ ದೂರು ನೀಡಿರುತ್ತಾಳೆ ಎಂದರೆ ಸರಿ. ಯು.ಡಿ.ಆರ್. ದೋಷರೋಪಣಾ ಸಲ್ಲಿಸಿದ ನಂತರ ಅಶ್ವಿನಿ ಕೊಟ್ಟಂತಹ ದೂರು ಸುಳ್ಳು ಎಂದು ನನಗೆ ಗೊತ್ತಾಯಿತು. 1 ನೇ ಆರೋಪಿತಳು ಕೊಟ್ಟಂತಹ ದೂರು ಸುಳ್ಳು ದೂರು ಆಗಿರುತ್ತದೆ ಎಂದು ನನಗೆ ಕಂಡು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು 2 ನೇ ಆರೋಪಿಯ ಪರವಾಗಿ ಶ್ರೀ. ಬಿ.ಬಿ.ಕೆ ವಕೀಲರಿಂದ</u>

6. ಮೇಲಿನ ಪಾಟಿ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಕೋರಿರುತ್ತಾರೆ, ಅನುಮತಿಸಲಾಯಿತು.

<u>ಮರುವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಯಾದಗಿರಿ.